ಬೆಂಗಳೂರು ಕೇಂದ್ರ ವಿಶ್ವವಿದ್ಯಾಲಯ BENGALURU CENTRAL UNIVERSITY

ಸಂಖ್ಯೆ:ಬಿಸಿಯು/ಕು.ಸ/ಸಂಯೋಜನೆ/2019-20 ದಿನಾಂಕ: 01-07-2019

## ಅಧಿಸೂಚನೆ

**ವಿಷಯ:** 2019-20ನೇ ಶೈಕ್ಷಣಿಕ ಸಾಲಿಗೆ ಸಂಯೋಜನೆ ನವೀಕರಿಸುವ ಬಗೆಗೆ.

ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮ 2000ದ 59ನೇ ಪ್ರಕರಣದ 17ನೇ ಉಪಬಂಧದಲ್ಲಿ ಪ್ರದತ್ತವಾದ ಅಧಿಕಾರದನ್ವಯ ಬೆಂಗಳೂರು ಕೇಂದ್ರ ವಿಶ್ವವಿದ್ಯಾಲಯವು, 2019-20ನೇ ಸಾಲಿಗೆ ಬೆಂಗಳೂರಿನ **ಆಚಾರ್ಯ ಸ್ಕೂಲ್ ಆಫ್ ಡಿಸೈನ್,** ನಡೆಸುತ್ತಿರುವ ಕೆಳಕಂಡ ಕೋರ್ಸಿಗೆ/ಕೋರ್ಸುಗಳಿಗೆ ಈ * ಷರತ್ತಿಗೊಳಪಟ್ಟು ಸಂಯೋಜನೆಯನ್ನು ನವೀಕರಿಸಿ ಮುಂದುವರಿಸಿದೆ.

| ಕೋರ್ಸು | ವಿಷಯ | ವಿದ್ಯಾರ್ಥಿ ಪ್ರವೇಶ ಪ್ರಮಾಣ |
|---|---|---|
| ಬಿ.ವಿ.ಎ | ಪೈಂಟಿಂಗ್ | 25 (ಇಪ್ಪತ್ತೈದು) |
| | ಗ್ರಾಫಿಕ್ ಡಿಸೈನ್ | 25 (ಇಪ್ಪತ್ತೈದು) |
| | ಪ್ರಾಡಕ್ಟ್ ಡಿಸೈನ್ | 25 (ಇಪ್ಪತ್ತೈದು) |
| | ಇಂಟೀರಿಯರ್ ಅಂಡ್ ಸ್ಪೇಷಿಯಲ್ ಡಿಸೈನ್ | 50 (ಐವತ್ತು) |
| | ಆನಿಮೇಷನ್ ಅಂಡ್ ಮಲ್ಟಿಮೀಡಿಯಾ | 50 (ಐವತ್ತು) |

**ವಿ.ಸೂ: 2019-20ನೇ ಸಾಲಿನ ಸ್ಥಳೀಯ ವಿಚಾರಣಾ ಸಮಿತಿಯ ವರದಿಯನ್ನು E-mail ಮೂಲಕ ಕಳುಹಿಸಿ ಕೊಡಲಾಗುವುದು. ವಿಶ್ವವಿದ್ಯಾಲಯ ನಿಗಧಿಪಡಿಸಿದ ವಿದ್ಯಾರ್ಥಿ ಪ್ರವೇಶ ಪ್ರಮಾಣದೊಂದಿಗೆ ಮಾತ್ರ ಸಂಯೋಜನೆಯನ್ನು ನವೀಕರಿಸಲಾಗಿದೆ. ಕಾಲೇಜು 30 ದಿನಗಳ ಒಳಗಾಗಿ ಸ್ಥಳೀಯ ವಿಚಾರಣಾ ಸಮಿತಿಯ ವರದಿಯಲ್ಲಿ "0"(Zero) ಎಂದು ನಮೂದಿಸಿರುವ ಕಾಲಂನಲ್ಲಿ ತಿಳಿಸಿರುವ ಕೊರತೆಗಳನ್ನು ಹಾಗೂ ನ್ಯೂನ್ಯತೆಗಳನ್ನು ಸರಿದೂಗಿಸಿಕೊಂಡು ಉತ್ತಮ ಪಡಿಸಿಕೊಂಡಿರುವ ಬಗ್ಗೆ ಅನುಸರಣಾ ವರದಿಯನ್ನು ನೀಡತಕ್ಕದ್ದು. ಇಲ್ಲವಾದಲ್ಲಿ 2020-21ನೇ ಶೈಕ್ಷಣಿಕ ವರ್ಷದ ಸಂಯೋಜನಾ ನವೀಕರಣದ ಅರ್ಜಿಯನ್ನು ಸ್ವೀಕರಿಸಲಾಗುವುದಿಲ್ಲ.**

*** ಷರತ್ತುಗಳು:**

1. ಸ್ಥಳೀಯ ವಿಚಾರಣಾ ಸಮಿತಿಯು ನಮೂದಿಸಿರುವ ಷರತ್ತುಗಳನ್ನು ಪಾಲಿಸತಕ್ಕದ್ದು.
2. ನಿಗಧಿತ ವಿದ್ಯಾರ್ಥಿ ಪ್ರವೇಶ ಪ್ರಮಾಣವನ್ನು ಮೀರಿದಲ್ಲಿ ಹೆಚ್ಚುವರಿ ಪ್ರವೇಶ ಪ್ರಮಾಣಕ್ಕೆ ವಿಶ್ವವಿದ್ಯಾಲಯ ಅಂಗೀಕಾರ ನೀಡುವುದಿಲ್ಲ.
3. ಯಾವುದೇ ಕೋರ್ಸಿಗೆ/ಕೋರ್ಸುಗಳಿಗೆ ವಿಶ್ವವಿದ್ಯಾಲಯದ ಪೂರ್ವಾನುಮತಿಯಿಲ್ಲದೆ ಶಾಖೆಗಳನ್ನು ಹೆಚ್ಚಿಸಬಾರದು.
4. ಸದರಿ ಪದವಿ ಕೋರ್ಸುಗಳಿಗೆ ವಿದ್ಯಾರ್ಥಿಗಳ ಪ್ರವೇಶ ಕಲ್ಪಿಸುವಾಗ ಸರ್ಕಾರದಿಂದ ಆಗಿಂದಾಗ್ಗೆ ಹೊರಡಿಸುವ **ಮೀಸಲಾತಿ ಆದೇಶಗಳನ್ನು** ಕಟ್ಟುನಿಟ್ಟಾಗಿ ಪಾಲಿಸತಕ್ಕದ್ದು.
5. ವಿಶ್ವವಿದ್ಯಾಲಯವು ಕಾಲೇಜಿನ ವಿದ್ಯಾರ್ಥಿಗಳು ಬೋಧಕರು ಹಾಗೂ ಬೋಧಕೇತರ ನೌಕರರ ಬಗ್ಗೆ ಕಾಲಕಾಲಕ್ಕೆ ಹೊರಡಿಸುವ ನಿಯಮಾವಳಿ/ಪರಿನಿಯಮಾವಳಿ ಮತ್ತು ಆದೇಶಗಳನ್ನು ಕಾಲೇಜು ಪಾಲಿಸತಕ್ಕದ್ದು. ಕಾಲೇಜು, ವಿಶ್ವವಿದ್ಯಾಲಯದ ಸಂಯೋಜನಾ ಅಧಿಸೂಚನೆಗನುಗುಣವಾಗಿ ಕೋರ್ಸುಗಳಿಗೆ ನಿಗದಿಪಡಿಸಿರುವ ವಿದ್ಯಾರ್ಥಿ ಪ್ರವೇಶ ಪ್ರಮಾಣ ಮೀರದಂತೆ ಹಾಗೂ ವಿಶ್ವವಿದ್ಯಾಲಯವು ಕೋರ್ಸುಗಳಿಗೆ ನಿಗಧಿಪಡಿಸಿರುವ ಅರ್ಹತಾ ನಿಯಮಾವಳಿಗಳನ್ನು ಉಲ್ಲಂಘಿಸದಂತೆ ಕೋರ್ಸುಗಳಿಗೆ ವಿದ್ಯಾರ್ಥಿಗಳ ಪ್ರವೇಶವನ್ನು ಮಾಡಿಸಿಕೊಳ್ಳತಕ್ಕದ್ದು.
6. ಸ್ನಾತಕೋತ್ತರ ಪದವಿ ಕೋರ್ಸುಗಳಿಗೆ ವಿಶ್ವವಿದ್ಯಾಲಯ ಕಾಲಕಾಲಕ್ಕೆ ನಿಗಧಿಪಡಿಸಿರುವ ಪ್ರವೇಶ ಮತ್ತು ಇತರೆ ಶುಲ್ಕಗಳನ್ನು ಮೀರದಂತೆ, ನಿಗಧಿಪಡಿಸಿದ ವಿದ್ಯಾರ್ಥಿ ಪ್ರವೇಶ ಪ್ರಮಾಣದ ಶೇಕಡಾ 50ರಂತೆ (ಸರ್ಕಾರಿ ಕಾಲೇಜುಗಳಿಗೆ ಶೇಕಡಾ 100ರಂತೆ) ವಿಶ್ವವಿದ್ಯಾಲಯವು ಪ್ರಾಯೋಜಿಸುವ ವಿದ್ಯಾರ್ಥಿಗಳ ಪ್ರವೇಶವನ್ನು ಮಾಡಿಸಿಕೊಳ್ಳತಕ್ಕದ್ದು.
7. ಸ್ನಾತಕೋತ್ತರ ಪದವಿ ಕೋರ್ಸ್‌ಗಳಿಗೆ ಬೆಂಗಳೂರು ಕೇಂದ್ರ ವಿಶ್ವವಿದ್ಯಾಲಯದ ವಿಭಾಗಗಳಲ್ಲಿ ನಿಗದಿ ಪಡಿಸಿರುವ ವಿದ್ಯಾರ್ಥಿ ಪ್ರಮಾಣಕ್ಕಿಂತ ಹೆಚ್ಚಿನ ವಿದ್ಯಾರ್ಥಿ ಪ್ರವೇಶ ಪ್ರಮಾಣವನ್ನು ನೀಡಲು ಅವಕಾಶವಿರುವುದಿಲ್ಲ.
8. ವೈಶಾಕ v/s ರಾಜಸ್ಥಾನ ರಾಜ್ಯ ಸರ್ಕಾರದ ವ್ಯಾಜ್ಯಕ್ಕೆ ಸಂಬಂಧಿಸಿದಂತೆ, ದಿನಾಂಕ: 13.08.1997ರ ಸರ್ವೋಚ್ಚ ನ್ಯಾಯಾಲಯದ ತೀರ್ಪಿನಂತೆ, ಕಾಲೇಜು ಅಥವಾ ಕಛೇರಿ, ಕೆಲಸ ನಿರ್ವಹಿಸುವ ಸ್ಥಳಗಳಲ್ಲಿ, ಯಾವುದೇ ವ್ಯಕ್ತಿಯಿಂದ (ಬೋಧಕ/ಬೋಧಕೇತರ/ಆಡಳಿತಮಂಡಳಿ) ಅಥವಾ ವಿದ್ಯಾರ್ಥಿಯಿಂದ ಮಹಿಳೆಯರಿಗೆ/ವಿದ್ಯಾರ್ಥಿನಿಯರಿಗೆ ಯಾವುದೇ ರೀತಿಯ ಕಿರುಕುಳ, ಲೈಂಗಿಕ ಕಿರುಕುಳ ನೀಡುವುದು ಶಿಕ್ಷಾರ್ಹ ಅಪರಾಧವಾಗಿದೆ. ಯಾವುದೇ ವ್ಯಕ್ತಿ/ವಿದ್ಯಾರ್ಥಿ ಈ ರೀತಿಯಾದ

ಚಟುವಟಿಕೆಗಳಲ್ಲಿ ಭಾಗಿಯಾಗಿದ್ದಲ್ಲಿ ಅಂತಹವರನ್ನು ಕೆಲಸದಿಂದ/ವಿದ್ಯಾರ್ಥಿದೆಸೆಯಿಂದ ವಿಮುಕ್ತಿಗೊಳಿಸಬಹುದಾಗಿದೆ. ಕಾಲೇಜು ಈ ರೀತಿಯ ಅಪರಾಧಗಳನ್ನು / ಚಟುವಟಿಕೆಗಳನ್ನು ಮಟ್ಟಹಾಕಲು ಸರ್ವೋಚ್ಚ ನ್ಯಾಯಲಯದ ಆದೇಶದಂತೆ ದೂರು ಸಮಿತಿಯನ್ನು ಸ್ಥಾಪನೆ ಮಾಡತಕ್ಕದ್ದು.

9. ವಿದ್ಯಾರ್ಥಿಗಳನ್ನು ಶೈಕ್ಷಣಿಕವಾಗಿ ಅಭಿವೃದ್ಧಿಗೊಳಿಸುವ ಮಟ್ಟಕ್ಕೆ ಕಾಲೇಜು, ಕೋರ್ಸುಗಳ ಶಿಕ್ಷಣ ಕ್ರಮವನ್ನು ಉತ್ತಮಪಡಿಸತಕ್ಕದ್ದು. ವಿದ್ಯಾರ್ಥಿಗಳನ್ನು ಹಾಗೂ ಸೇವೆಯಲ್ಲಿರುವ ಬೋಧಕರುಗಳನ್ನು ಪ್ರಾಂಶುಪಾಲರು / ಆಡಳಿತಮಂಡಳಿಯವರು ಸಹಾನುಭೂತಿಯಿಂದ ನೋಡಿಕೊಳ್ಳತಕ್ಕದ್ದು.

10. ಕಾಲೇಜು ವಿನಾಕಾರಣ ವಿದ್ಯಾರ್ಥಿಗಳ ಅಂಕಪಟ್ಟಿ ಹಾಗೂ ಇತರೆ ದಾಖಲೆಗಳನ್ನು ಆರು ತಿಂಗಳ ಅವಧಿ ಮೀರದಂತೆ ತಮ್ಮಲ್ಲಿಯೇ ಇಟ್ಟುಕೊಳ್ಳತಕ್ಕದ್ದಲ್ಲ. ಪ್ರವೇಶ ಅನುಮೋದನೆಗಾಗಿ ಸಲ್ಲಿಸಿರುವ ಅಂಕಪಟ್ಟಿ ಹಾಗೂ ಇತರೆ ದಾಖಲೆಗಳನ್ನು, ಪ್ರವೇಶ ಅನುಮೋದನೆಯಾದ ನಂತರ ವಿದ್ಯಾರ್ಥಿಗಳಿಗೆ ತ್ವರಿತವಾಗಿ ವಿತರಣೆಯನ್ನು ಮಾಡಿ ವಿಶ್ವವಿದ್ಯಾಲಯಕ್ಕೆ ತಿಳಿಸತಕ್ಕದ್ದು.

11. ವಿದ್ಯಾರ್ಥಿಗಳು, ವರ್ಗಾವಣೆ ಪತ್ರವನ್ನು ನೀಡುವ ಬಗ್ಗೆ ಮನವಿ ಸಲ್ಲಿಸಿದಲ್ಲಿ, ಕಾಲೇಜು ವಿದ್ಯಾರ್ಥಿಗಳಿಗೆ ಯಾವುದೇ ತೊಂದರೆ ನೀಡದೆ, ವರ್ಗಾವಣೆ ಪತ್ರವನ್ನು ನೀಡತಕ್ಕದ್ದು. ಈ ಬಗ್ಗೆ ಆ ವರ್ಷದ/ ಸೆಮಿಸ್ಟರಿನ ಪೂರ್ಣವಾಗದ ಅವಧಿಯ ಭೋದನಾ ಶುಲ್ಕವನ್ನು ಹೊರತುಪಡಿಸಿ, ಯಾವುದೇ ಹೆಚ್ಚುವರಿ ಶುಲ್ಕವನ್ನು ವಸೂಲಿ ಮಾಡಲು ನಿಯಮಾವಳಿ ಪ್ರಕಾರ ಅನುಮತಿ ಇರುವುದಿಲ್ಲ.

12. ಯಾವುದೇ ರೀತಿಯಾದ ಕ್ಯಾಪಿಟೇಷನ್ ಶುಲ್ಕವನ್ನು ಕಾಲೇಜು ವಸೂಲಿ ಮಾಡತಕ್ಕದ್ದಲ್ಲ.

13. ಆಡಳಿತ ವ್ಯವಹಾರದಲ್ಲಿ ಕನ್ನಡವನ್ನು ಕಡ್ಡಾಯವಾಗಿ ಬಳಸತಕ್ಕದ್ದು.

14. 2020-21ನೇ ಸಾಲಿಗೆ ಕೋರ್ಸುಗಳ ಸಂಯೋಜನಾ ನವೀಕರಣಕ್ಕೆ ಕಾಲೇಜು ತಪ್ಪದೆ ಅರ್ಜಿಯನ್ನು ಸಲ್ಲಿಸತಕ್ಕದ್ದು.

15. ಐದು ವರ್ಷಗಳನ್ನು ಪೂರೈಸಿರುವ ಕಾಲೇಜುಗಳು ನ್ಯಾಕ್(NAAC) ಅನುಮೋದನೆಯನ್ನು ಕೂಡಲೇ ಪಡೆದುಕೊಳ್ಳತಕ್ಕದ್ದು.

16. ಪ್ರಾಂಶುಪಾಲರು, ಮೌಲ್ಯಮಾಪನ ಕಾರ್ಯಕ್ಕಾಗಿ ಅರ್ಹ ಶಿಕ್ಷಕರ ಪಟ್ಟಿಯನ್ನು ಸಂಬಂಧಿಸಿದ ಪರೀಕ್ಷಾ ಮಂಡಳಿಗಳ ಅಧ್ಯಕ್ಷರುಗಳಿಗೆ ತಪ್ಪದೇ ಸಲ್ಲಿಸತಕ್ಕದ್ದು ಹಾಗೂ ಕಡ್ಡಾಯವಾಗಿ ಮೌಲ್ಯಮಾಪನ ಕಾರ್ಯಕ್ಕೆ ಕಳುಹಿಸತಕ್ಕದ್ದು, ತಪ್ಪಿದ್ದಲ್ಲಿ ಕಾಲೇಜಿನ ಸಂಯೋಜನೆಯನ್ನು ರದ್ದುಪಡಿಸಲಾಗುವುದು.

ಆಜ್ಞೆ ಮೇರೆಗೆ

ಕುಲಸಚಿವರು 10/7

ಗೆ,

**ಪ್ರಾಂಶುಪಾಲರು,**

**ಆಚಾರ್ಯ ಸ್ಕೂಲ್ ಆಫ್ ಡಿಸೈನ್,**

ಆಚಾರ್ಯ ಡಾ॥ ರಾಧಾಕೃಷ್ಣ ರಸ್ತೆ,ಸೋಲದೇವನಹಳ್ಳಿ,
ಹೆಸರುಘಟ್ಟ, ಮುಖ್ಯರಸ್ತೆ, ಅಚಿತನಗರ ಅಂಚೆ,
ಬೆಂಗಳೂರು–560107

ಪ್ರತಿಗಳು:

1) ಸರ್ಕಾರದ ಪ್ರಧಾನ ಕಾರ್ಯದರ್ಶಿಯವರು, ಶಿಕ್ಷಣ ಇಲಾಖೆ (ಉನ್ನತ ಶಿಕ್ಷಣ), ಬಹುಮಹಡಿಗಳ ಕಟ್ಟಡ, ಡಾ॥.ಅಂಬೇಡ್ಕರ್ ವೀಧಿ, ಬೆಂಗಳೂರು –560 001.
2) ನಿರ್ದೇಶಕರು, ಕಾಲೇಜು ಶಿಕ್ಷಣ ನಿರ್ದೇಶನಾಲಯ, ಬೆಂಗಳೂರು –560 001.
3) ಕುಲಸಚಿವರು (ಮೌಲ್ಯಮಾಪನ), ಬೆಂಗಳೂರು ಕೇಂದ್ರ ವಿಶ್ವವಿದ್ಯಾಲಯ, ಬೆಂಗಳೂರು –560 001.